# ಯುದ್ಧ

ಮಾನವನು ಬೀಜ ಇದ್ದಹಾಗೆ. ಅವನು ಬೆಳೆದು ವೃಕ್ಷವಾಗಬೇಕು. ಬೀಜವು ಬೀಜವಾಗಿಯೇ ಮರಣಿಸಿದರೆ, ಅದು ಬೆಳೆಯದೇ ಮರಣಹೊಂದಿದೆ ಎಂದರ್ಥ. ಹಾಗೆಯೇ ಬೀಜವು ಬೆಳೆಯದಿದ್ದರೆ, ಅದು ತನ್ನ ಮರಣವನ್ನು ಸಮೀಪಿಸುತ್ತಿದೆ ಎಂದರ್ಥ. ಆದುದರಿಂದ ನೀವು ಬೆಳೆಯಬೇಕು ಅಥವಾ ಮರಣಿಸಬೇಕು. ಬೇರೆ ದಾರಿ ಇಲ್ಲ.

ಬೀಜವು ಎರಡು ವಿಧದಲ್ಲಿ ಮರಣ ಹೊಂದಬಹುದು. ಒಂದು ಬೆಳೆಯದೇ ಮರಣ ಹೊಂದಬಹುದು ಅಥವಾ ಬೆಳೆಯುವುದಕ್ಕಾಗಿ ಮರಣ ಹೊಂದಬಹುದು, ಇದರ ಅರ್ಥ ಬೀಜವು ಮರಣ ಹೊಂದಿ ಸಸಿಯಾಗಿ ಹುಟ್ಟಬಹುದು. ಆದ್ದರಿಂದ ಬೆಳೆಯುವುದಕ್ಕಾಗಿ ಮರಣ ಹೊಂದುವುದು ಎನ್ನುವುದು ಹೆಚ್ಚು ಕಾಲ ಜೀವಿಸಲು ದ್ವಾರವಾಗುತ್ತದೆ. ಬೆಳೆಯುವುದಕ್ಕಾಗಿ ಮರಣ ಹೊಂದುವುದೆಂದರೆ ಪ್ರಸ್ತುತ ಸ್ಥಿತಿಗಿಂತ ಉನ್ನತವಾದ ಸ್ಥಿತಿಯಲ್ಲಿ ಹುಟ್ಟುವುದು, ಎಂದರೆ ಒಂದು ಆಯಾಮದಲ್ಲಿ ಮಾಯವಾಗಿ ಮತ್ತೊಂದು ಉನ್ನತವಾದ ಆಯಾಮದಲ್ಲಿ ಪ್ರತ್ಯಕ್ಷವಾಗುವುದು.

ಮಾನವನು ಪದಾರ್ಥವಾಗಿ ಮರಣಿಸಿ ಆತ್ಮದ ಒಳಗೆ ಪುನರ್ಜನ್ಮಿಸುವುದು ಪ್ರತಿದಿನ ನಡೆಯಬೇಕು ಅಥವಾ "ಅಂತರ್ ಪ್ರಯಾಣ" ಟಾಪಿಕ್ ನಲ್ಲಿ ತಿಳಿಸಿರುವ ಹಾಗೆ ಅಧಿಪತಿಯು ಹುಟ್ಟಬೇಕು. ಎಂದರೆ ಸ್ವಚ್ಛಗೊಳ್ಳಬೇಕು ಅಥವಾ ತಿಳಿದಿರುವ ಆಯಾಮದಲ್ಲಿ ಮರಣಿಸಿ ತಿಳಿಯದ ಆಯಾಮದಲ್ಲಿ ಪುನರ್ಜನ್ಮಿಸಬೇಕು. ಇಲ್ಲಿ ತಿಳಿದಿರುವುದು ಪದಾರ್ಥ, ತಿಳಿಯದೇ ಇರುವುದು ಮತ್ತು ರಹಸ್ಯವಾದದ್ದು ಆತ್ಮ. ತಿಳಿಯದ ಜ್ಞಾನವು ತಿಳಿದರೆ ಅದೂ ಸಹ ಪದಾರ್ಥವಾಗುತ್ತದೆ. ಅದೇ ರೀತಿ ಪದಾರ್ಥವೆಂದರೆ ಆಕಾರ (ರೂಪ), ಎಂದರೆ ಅಹಂ. ಅಂದರೆ ಈ ಮಾಯಾ ಪ್ರಪಂಚದಲ್ಲಿ ಅಹಂ-ಕರ್ತನಾಗಿ ಅಥವಾ ಮಾಡುವ-ಸ್ವಯಂ ನಾನಾಗಿ ಅಥವಾ ಜೀವಾತ್ಮದಂತೆ ಹಲವಾರು ಪಾತ್ರಗಳನ್ನು ಪೋಷಿಸುತ್ತಿರುವ ನೀವು ಪಾತ್ರಧಾರಿಯಾಗಿ ಮರಣಹೊಂದಿ, ಪ್ರತಿದಿನ ನಿರಾಕಾರನಾಗಿ ಅಥವಾ ಅಧಿಪತಿಯಾಗಿ ಅಥವಾ ನೋಡುವ-ಸ್ವಯಂ ನಾನಾಗಿ ಅಥವಾ ಸೂತ್ರಧಾರನಾಗಿ ಪುನರ್ಜನ್ಮಿಸಬೇಕೆಂದು ಅರ್ಥ.

ಹೀಗೆ ತಿಳಿದಿರುವುದರಲ್ಲಿ ಮರಣಿಸಿ, ತಿಳಿಯದಿರದ ಆಯಾಮದಲ್ಲಿ ಪುನರ್ಜನ್ಮಿಸುವುದು ನಿರಂತರವಾಗಿ ನಡೆಯುತ್ತಿರಬೇಕು. ಆಗಲೇ ಅಭಿವೃದ್ಧಿ ಎನ್ನುವುದು ಸಾಧ್ಯವಾಗುತ್ತದೆ. ಇಲ್ಲಿ ಮರಣ ಹೊಂದಲು ಸಿದ್ಧವಾಗಬೇಕಾದುದು ಶರೀರ ಅಲ್ಲವೆಂದು, ಅದರಲ್ಲಿ ವಾಸಿಸುತ್ತಿರುವ ಅಹಂ-ಕರ್ತನಾದ ನೀವೇ ಎನ್ನುವ ವಿಷಯವನ್ನು ಸದಾ ನೆನಪಿನಲ್ಲಿಟ್ಟುಕೊಳ್ಳಿರಿ.

ಈ ರೀತಿ ಮಾಯಾ ಪ್ರಪಂಚದಲ್ಲಿರುವ ಮೂರು ಗುಣಗಳನ್ನು, ಮನುಷ್ಯರನ್ನು, ಇನ್ನುಳಿದ ಎಲ್ಲವನ್ನೂ ಒಂದು ಉಪಕರಣದಂತೆ ಉಪಯೋಗಿಸಿಕೊಂಡು, ಅಂತರಂಗದಲ್ಲಿ ಇರುವ ಶಾಶ್ವತವಾದ ನೆಲೆಯನ್ನು ಕಂಡುಕೊಂಡು, ನಂತರ ಪ್ರಾಪಂಚಿಕವಾದ ಎಲ್ಲವನ್ನೂ ಸ್ವಚ್ಛಗೊಳಿಸಿ ಶಾಶ್ವತವಾದ ನೆಲೆಯೊಳಗೆ ಪ್ರವೇಶಿಸುವುದೇ ನಿಮ್ಮ ಪ್ರತಿ ದಿನದ ಗುರಿಯಾಗಿ ಇರಬೇಕೆನ್ನುವ ವಿಷಯವನ್ನು ಸದಾ ಜ್ಞಾಪಕದಲ್ಲಿಟ್ಟುಕೊಳ್ಳಿರಿ.

ಆದ್ದರಿಂದ ಈಗ ಮರಣಹೊಂದಿ ಪುನಃ ಪುನರ್ಜನ್ಮಿಸುವುದು ಹೇಗೆ ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ? ಪ್ರತಿನಿತ್ಯವೂ ನೀವು ಅನೇಕ ಸಂಕಲ್ಪಗಳನ್ನು ಮಾಡುತ್ತಿರುತ್ತೀರಿ. ಉದಾಹರಣೆಗೆ, ನೀವು ಯಾವುದಾದರೂ ಒಳ್ಳೆಯ ಕೆಲಸವನ್ನು ಸಂಕಲ್ಪಿಸಿ ಧ್ಯಾನವನ್ನು ಮಾಡಿದಾಗ, 100% ಶಕ್ತಿಯು ಕೇವಲ ಒಳ್ಳೆಯದಕ್ಕೊಂದೇ ಲಭಿಸುವುದಿಲ್ಲ, ಕೆಟ್ಟದ್ದಕ್ಕೂ ಮತ್ತು ತಟಸ್ಥಕ್ಕೂ ಸಹ ಲಭಿಸುತ್ತದೆ. ಆದುದರಿಂದ ಏನಾದರೂ ಸಂಕಲ್ಪಿಸಿದ ತಕ್ಷಣ ಆ ಸಂಕಲ್ಪವು ನೆರವೇರುತ್ತದೋ ಇಲ್ಲವೋ ಎನ್ನುವ ಭಯವೂ ಸಹ ನಮ್ಮಲ್ಲುಂಟಾಗುತ್ತದೆ.

"ಧರ್ಮ" ಟಾಪಿಕ್ ನಲ್ಲಿ ತಿಳಿಸಿದ ಹಾಗೆ ನಿಮ್ಮಲ್ಲಿ ಗುಣಗಳ ಮಿಶ್ರಣ ಹೇಗೆ ಇರುತ್ತದೋ ಹಾಗೆ, ಉದಾಹರಣೆಗೆ 60% ಒಳ್ಳೆಯದು, 30% ಕೆಟ್ಟದು, 10% ತಟಸ್ಥವಾದ ಗುಣಗಳು ಇದ್ದರೆ, ಅದಕ್ಕೆ ಅನುಗುಣವಾಗಿ ವಿರುದ್ಧವಾದ ಶಕ್ತಿಗಳನ್ನು ಆಕರ್ಷಿಸುತ್ತವೆ. ಈ ಮಿಶ್ರಣ ಎನ್ನುವುದು ಎಲ್ಲರಲ್ಲೂ ಒಂದೇ ರೀತಿಯಲ್ಲಿ ಇರುವುದಿಲ್ಲ. ಯಾರಲ್ಲಿ ಎಷ್ಟು ಇರುತ್ತದೆ ಎಂದು ಖಚಿತವಾಗಿ ಹೇಳುವುದು ತುಂಬಾ ಕಷ್ಟ. ಅದೇ ರೀತಿ ಅದು ಪರಿಸ್ಥಿತಿಗಳಿಗೆ ಅನುಗುಣವಾಗಿ ಬದಲಾಗುತ್ತಿರುತ್ತದೆ. ಆಗ ಸಾಧನೆಯನ್ನು ಮಾಡಿ ಗುಣಗಳ ಮಿಶ್ರಣವನ್ನು ಸಮಾನ ಅನುಪಾತದಲ್ಲಿ ಬರುವಂತೆ ಪ್ರಯತ್ನಿಸಬೇಕು. ಈ ಮಿಶ್ರಣವು ನಿಮ್ಮಲ್ಲಿ ಸಮಾನ ಅನುಪಾತವನ್ನು ತಲುಪಿದಾಗ ನೀವು ಪರಮಾನಂದದ ಅನುಭೂತಿಯನ್ನು ಹೊಂದುತ್ತೀರಿ.

ಅದೇ ರೀತಿ ನೀವು ಏನೇ ಸಂಕಲ್ಪಿಸಿದರೂ ಅದಕ್ಕೆ ಸಬಂಧಪಟ್ಟ ಮೂರು ವಿರುದ್ಧವಾದ ಪಾತ್ರಗಳು ಖಂಡಿತವಾಗಿ ಸೃಷ್ಟಿಸಲ್ಪಡುತ್ತವೆ ಎಂದು ಗ್ರಹಿಸಿರಿ. ಅಂದರೆ ನೀವು ಒಳ್ಳೆಯ ಗುರುವಾಗಬೇಕೆಂದು ಸಂಕಲ್ಪಿಸಿದರೆ, ನಿಮಗೆ ತಿಳಿಯದೇ ನೀವು ಕೆಟ್ಟ ಮತ್ತು ತಟಸ್ಥದ ಗುರುಗಳಾಗಬೇಕೆಂದು ಸಹ ಸಂಕಲ್ಪಿಸಿದಂತೆ ಎಂದು ಇದರ ಅರ್ಥ. ಅದೇ ರೀತಿ, ಅದಕ್ಕೆ ಅನುಗುಣವಾಗಿ ನೀವು ಕೆಟ್ಟ-ಒಳ್ಳೆಯ-ತಟಸ್ಥ ಶಿಷ್ಯನ ಪಾತ್ರಗಳನ್ನು ಸಹ ಸಂಕಲ್ಪಿಸಿದಂತೆಯೇ. ಆದುದರಿಂದ ಗುರುವು ಶಿಷ್ಯನಿಗೆ ಮತ್ತು ಶಿಷ್ಯನು ಗುರುವಿಗೆ ಮೂರು ತರಹ ಕಾಣುವುದನ್ನು ಗಮನಿಸಬಹುದು. ಆದುದರಿಂದ ಇವೆಲ್ಲವೂ ನಿಮ್ಮ ಸಂಕಲ್ಪಕ್ಕೆ ಅನುಗುಣವಾಗಿಯೇ ಸಂಭವಿಸುತ್ತದೆ ಎಂದು ಅರ್ಥ ಮಾಡಿಕೊಂಡು, ಇದನ್ನು ನಾನೇ ಸೃಷ್ಟಿಸಿದ್ದೇನೆ, ಇಷ್ಟು ದಿನ ನಾನೇ ಪೋಷಿಸಿದ್ದೇನೆ ಆದುದರಿಂದ ಈಗ ಲಯಬದ್ಧಗೊಳಿಸುವ ಜವಾಬ್ದಾರಿಯೂ ಸಹ ನನ್ನದೇ ಎಂದು ಆ ಸಂಕಲ್ಪಕ್ಕೆ ಸಂಬಂಧಪಟ್ಟ ಮೂರು ಗುಣಗಳನ್ನು ಎಂದರೆ ಗುರುವು ಮತ್ತು ಶಿಷ್ಯನ ಪಾತ್ರಗಳೆಲ್ಲವೂ ಲಯಬದ್ಧಗೊಳಿಸಿರಿ, ಅಂದರೆ ಸ್ವಚ್ಛಗೊಳಿಸಿರಿ ಎಂದರ್ಥ.

ವಿರುದ್ಧವಾದವುಗಳ ಮಧ್ಯೆ ಯುದ್ಧ ಅಥವಾ ಅವುಗಳ ಮಧ್ಯೆ ಮಿತ್ರತ್ವವನ್ನು ಸೃಷ್ಟಿಸುವ ಮೂಲಕ ಅವುಗಳನ್ನು ಲಯಬದ್ಧಗೊಳಿಸಬಹುದು. ಆದುದರಿಂದ ನೀವು ಮಾಡಬೇಕಾದುದೇನೆಂದರೆ ಸಂಕಲ್ಪಿಸಿದವುಗಳಿಗೆ ಸಂಬಂಧಪಟ್ಟ ಅನುಭವಗಳನ್ನು ದಿವ್ಯವಾಗಿ ಅನುಭವಿಸುತ್ತಾ, ಆ ಅನುಭವಗಳಿಗೆ ಸಂಬಧಪಟ್ಟ ಲಕ್ಷಣಗಳ ಸಹಾಯದಿಂದ ನೀವು ಅಧಿಪತಿಯಾಗಿ ಪುನರ್ಜನ್ಮಿಸುವುದಕ್ಕಾಗಿಯೇ ಮರಣ ಹೊಂದಬೇಕೆಂದು ನಿರ್ಧರಿಸಿಕೊಳ್ಳಬೇಕು. ನಂತರ ವಿರುದ್ಧವಾದವುಗಳ ಮಧ್ಯೆ ಮಿತ್ರತ್ವವನ್ನು ಸೃಷ್ಟಿಸಿ ಒಂದಾಗಿಸಬೇಕು. ಇದರ ಬಗ್ಗೆ ಮತ್ತಷ್ಟು ವಿಷಯವನ್ನು ತಿಳಿಯಲು "ಅಂತರ್ ಪ್ರಯಾಣ" ಎನ್ನುವ ಟಾಪಿಕ್ ನ್ನು ಓದಿರಿ.

ಆದರೆ ಕೆಲವು ಪಾತ್ರಗಳು ಮಿತ್ರತ್ವಕ್ಕೆ ಸಹಕರಿಸುವುದಿಲ್ಲ, ಏಕೆಂದರೆ ಅವು ಒಳ್ಳೆಯ-ಕೆಟ್ಟ-ತಟಸ್ಥಗಳ ನಡುವೆ ಶತ್ರುತ್ವ ಇದ್ದಾಗ ಸಂಕಲ್ಪಿಸಿ ಸೃಷ್ಟಿಸಲ್ಪಟ್ಟ ಪಾತ್ರಗಳು. ಅವು ಇದೇ ರೀತಿಯಾಗಿ ಪ್ರೋಗ್ರಾಮಿಂಗ್ ಮಾಡಲ್ಪಟ್ಟಿವೆ ಆದ್ದರಿಂದ ಅವುಗಳಿಗೆ ಕೇವಲ ಯುದ್ಧವನ್ನು ಮಾಡುವುದು ಮಾತ್ರ ಗೊತ್ತಿದೆ. ಅಂದರೆ ನೀವು ನ್ಯೂ ಎನರ್ಜಿ ಕಾನ್ಸೆಪ್ಟ್ ಅನುಸರಿಸುವ ಮುಂಚೆ, ವಿರುದ್ಧವಾದವುಗಳನ್ನು ಶತ್ರುಗಳೆಂದು ಭಾವಿಸುವ ಸ್ಥಿತಿಯಲ್ಲಿದ್ದು, ಆ ಪಾತ್ರಗಳೊಂದಿಗೆ ಬಂಧವನ್ನು ಮುಂದುವರೆಸಿವೆ. ಅದ್ದರಿಂದ ಅವು ತಿರಸ್ಕರಿಸಲ್ಪಟ್ಟು, ಏನೇ ಆದರೂ ಬೆರೆಯಲು ಇಷ್ಟಪಡುವುದಿಲ್ಲ. ಅವು ನಿಮಗೆ ಧ್ಯಾನ ಮಾಡುವುದಕ್ಕೂ ಸಹ ಅಡ್ಡಿಪಡಿಸುತ್ತವೆ, ಅದೇ ರೀತಿ ನಿಮಗೆ ಶರಣಾಗುತ್ತೇನೆ, ಸ್ವಚ್ಛವಾಗಲು ನನಗೆ ಸಹಕರಿಸಿರಿ ಎಂದು ಅವುಗಳಿಗೆ ನೀವು ಎಷ್ಟೇ ಬೇಡಿಕೊಂಡರೂ, ಅವು ಯುದ್ಧಕ್ಕೆ ಹೊರತುಪಡಿಸಿ ಯಾವುದಕ್ಕೂ ಒಪ್ಪಿಕೊಳ್ಳುವುದಿಲ್ಲ. ಹಾಗೆಯೇ ಅವುಗಳ ಪ್ರಭಾವದಿಂದ ನೀವು ಗೊಂದಲಕ್ಕೆ ಒಳಗಾಗುತ್ತಿದ್ದೀರೆಂದರೆ

ನಿಮ್ಮಲ್ಲಿಯೂ ಸಹ ದೋಷವಿದೆ ಎಂದರ್ಥ. ನೀವೂ ಸಹ ಇಲ್ಲಿ ಪಾತ್ರಗಳಲ್ಲಿ ಸಿಲುಕಿಕೊಂಡಿರುವಿರೆಂದು ಹಾಗೂ ಸ್ವಚ್ಛವಾಗಿಲ್ಲವೆಂದು ಅರ್ಥ.

ಆದ್ದರಿಂದ "ಕರಗಿ ಹೋಗಿ" ಸಾಧನೆಯನ್ನು ಮಾಡಿ ಸ್ವಚ್ಛವಾದ ನಂತರವೇ, ನೀವು ನಿರ್ವಹಿಸಿದ ಪಾತ್ರದೊಂದಿಗೆ ಹಾಗೆಯೇ ನಿಮ್ಮಲ್ಲಿರುವ ಇನ್ನುಳಿದ ಪಾತ್ರಗಳೊಂದಿಗೆ ಅಂತರಂಗದಲ್ಲಿ ಯುದ್ಧವನ್ನು ಮಾಡಿ ವಿರುದ್ಧವಾದವುಗಳೆಲ್ಲವನ್ನೂ ಸರ್ವನಾಶ ಮಾಡಿ. ಹೀಗೆ ಮಾಡುವುದರಿಂದ ಧ್ವಂಸವಾದ ಶಕ್ತಿಗಳು ಸ್ವಚ್ಛವಾದ ಶಕ್ತಿಗಳಾಗಿ ಪರಿವರ್ತನೆ ಹೊಂದಿ ನಿಮ್ಮ ಹೊಸ ಸಂಕಲ್ಪಗಳಿಗೆ ಉಪಯೋಗಪಡುತ್ತವೆ.

ಆದರೆ ಶಕ್ತಿಯನ್ನು ಸೃಷ್ಟಿಸಲಾರೆವು ಹಾಗೂ ನಾಶವನ್ನೂ ಸಹ ಮಾಡಲಾರೆವು, ಎನ್ನುವ ಸಂದೇಹ ಇಲ್ಲಿ ನಿಮ್ಮಲ್ಲಿ ಉಂಟಾಗಬಹುದು. ಇದಕ್ಕೆ ನನ್ನ ಉತ್ತರವೇನೆಂದರೆ, ಶಕ್ತಿಯನ್ನು ಸಂಪೂರ್ಣವಾಗಿ ನಾಶ ಮಾಡುತ್ತಿಲ್ಲವೆಂದು, ಅದರೊಂದಿಗೆ ಪ್ರೀತಿಯಿಂದಲ್ಲದೇ, ಕಠಿಣವಾಗಿದ್ದು ನಾಶಗೊಳಿಸಿ ಸ್ವಚ್ಛವಾದ ಶಕ್ತಿಯನ್ನಾಗಿ ಪರಿವರ್ತನೆಗೊಳಿಸುತ್ತಿದ್ದೇವೆ ಎಂದು. ಅದೇ ರೀತಿ ನಿಮ್ಮದು ನ್ಯೂ ಎನರ್ಜಿ ಕಾನ್ಸೆಪ್ಟ್ ಅಲ್ವಾ, ಅಂದರೆ ಹೊಸ ಶಕ್ತಿಯನ್ನು ಹುಟ್ಟಿಸಬಹುದಲ್ಲ ಎನ್ನುವ ಸಂದೇಹವೂ ಸಹ ನಿಮ್ಮಲ್ಲುಂಟಾಗಬಹುದು. ಇದಕ್ಕೆ ನನ್ನ ಉತ್ತರವೇನೆಂದರೆ, ದೇವರ ಬಳಿ ಸ್ವಚ್ಛವಾದ ಶಕ್ತಿಯು ಹೇರಳವಾಗಿದೆ ಎಂದು ಮತ್ತು ಇದನ್ನೇ ನಾನು ನ್ಯೂ ಎನರ್ಜಿ ಎಂದು ಹೇಳುತ್ತಿದ್ದೇನೆ, ನೀವು ಸ್ವಚ್ಛವಾದಾಗ ಮಾತ್ರ ಇದು ನಿಮಗೆ ಲಭ್ಯವಾಗುತ್ತದೆ.

## ಸಾಧನೆ

ಉದಾಹರಣೆಗೆ ಪತ್ನಿಯ ಮಾತು ಪತಿ ಕೇಳಿಸಿಕೊಳ್ಳದೇ ತನ್ನ ತಮ್ಮನ ಮಾತನ್ನು ಕೇಳುತ್ತಿರುವನೆಂದು ಭಾವಿಸೋಣ. ಆಗ ಪತ್ನಿಯು ಮಾಡಬೇಕಾದ ಸಾಧನೆ ಏನೆಂದರೆ- ನೀವು ನನ್ನ ಮಾತು ಕೇಳದೇ ನಿಮ್ಮ ತಮ್ಮನ ಮಾತನ್ನು ಕೇಳುತ್ತಿದ್ದೀರಿ. ನಾನು ಹೇಳುವ ಮಾತುಗಳು ನಿಮ್ಮ ಮೇಲೆ ಪ್ರಭಾವ ಬೀರುತ್ತಿಲ್ಲ. ಆದುದರಿಂದಲೇ ನೀವು ಅವನ ಮಾತನ್ನು ಕೇಳುತ್ತಿದ್ದೀರೆಂದು ನಾನು ಅರ್ಥಮಾಡಿಕೊಂಡಿದ್ದೇನೆ. ಆದುದರಿಂದ ನಾನು ಪತ್ನಿಯ ಪಾತ್ರದಿಂದ ಹೊರಬಂದು ತಟಸ್ಥಳಾಗಿದ್ದು ನಿಮ್ಮನ್ನು ಪರಿವರ್ತಿಸಬೇಕೆಂದು ನೋಡದೇ, ಹೇಗಿರುವಿರೋ ಹಾಗೆಯೇ ಸ್ವೀಕರಿಸುತ್ತಿದ್ದೇನೆ. ನೀವು ಸಹ ಪತ್ನಿಯ ಪಾತ್ರವನ್ನು ಸ್ವೀಕರಿಸಿರಿ ಎಂದು ಅಂತರಂಗದಲ್ಲಿ ಹೇಳಿಕೊಂಡು, ಪಾತ್ರಗಳ ಮಧ್ಯೆ ಮಿತ್ರತ್ವವನ್ನು ಸೃಷ್ಟಿಸಲು ಪ್ರಯತ್ನಿಸಿರಿ. ಅಥವಾ ಅವುಗಳ ಸಹಾಯದಿಂದ ಸ್ವಚ್ಛವಾಗಲು ಪ್ರಯತ್ನಿಸಿರಿ.

ಒಂದು ವೇಳೆ ಪಾತ್ರಗಳು ಸಹಕರಿಸದಿದ್ದರೆ - ನೀವು ಒಬ್ಬರೆ ಕುಳಿತು ಅಂತರಂಗದಲ್ಲಿ ಪತ್ನಿಯ ಪಾತ್ರದೊಂದಿಗಿದ್ದು ಪತಿಯ ಮತ್ತು ತಟಸ್ಥದ ಪಾತ್ರದೊಂದಿಗೆ, ಅದೇ ರೀತಿ ಪತಿಯ ಪಾತ್ರದೊಂದಿಗಿದ್ದು ಪತ್ನಿಯ ಮತ್ತು ತಟಸ್ಥದ ಪಾತ್ರದೊಂದಿಗೆ, ಹಾಗೆಯೇ ತಟಸ್ಥದ ಪಾತ್ರದೊಂದಿಗಿದ್ದು ಪತಿಯ ಮತ್ತು ಪತ್ನಿಯ ಪಾತ್ರದೊಂದಿಗೆ ಯುದ್ಧವನ್ನು ಮಾಡಿರಿ. ಹೀಗೆ ಒಂದು ಕಡೆ ಇರುತ್ತಾ ಇನ್ನುಳಿದವುಗಳನ್ನು ನಾಶಗೊಳಿಸುತ್ತಾ ಕೊನೆಗೆ ಸ್ವಚ್ಛವಾದ ಜೀವಾತ್ಮನಾಗಿದ್ದು ಒಳ್ಳೆಯ-ಕೆಟ್ಟ-ತಟಸ್ಥದ ವಿರುದ್ಧವಾದವುಗಳನ್ನು ಒಮ್ಮೆಲೇ ನಾಶಗೊಳಿಸಿರಿ. ಏಕೆಂದರೆ ಇವು ಸ್ವಚ್ಛವಾದ ಶಕ್ತಿಯಿಂದ ಒಮ್ಮೆಲೇ ಹುಟ್ಟಿವೆ. ಆದುದರಿಂದ ಅವೆಲ್ಲವೂ ಒಟ್ಟಿಗೆ ಬೆಳೆದು, ನಂತರ ಒಮ್ಮೆಲೇ ಬೆರೆತು ಲಯಗೊಂಡು ಸ್ವಚ್ಛವಾದ ಶಕ್ತಿಯೊಳಗೆ ಮತ್ತೇ ಮರಳಿ ಬೆರೆತು ಹೋಗುತ್ತವೆ.

ಅಂದರೆ ಇಲ್ಲಿ ಯಾವುದಾದರೂ ಒಂದು ಮಾತ್ರವೇ ಉಳಿದಿರುವುದು ಅಸಾಧ್ಯವೆಂದು, ಮೂರೂ ವಿರುದ್ಧವಾದವುಗಳು ಯಾವಾಗಲೂ ಇರುತ್ತವೆಂದು ಅರ್ಥ. ಧ್ಯಾನದ ಮೂಲಕ ಅಥವಾ ನಿದ್ರೆಯ ಮೂಲಕ ಶಕ್ತಿಯು ಮೂರಕ್ಕೂ ಲಭಿಸುತ್ತದೆ. ಆದ್ದರಿಂದ ಯಾವುದಾದರೊಂದು ದುರ್ಬಲಗೊಂಡರೂ ಅದು ಶಕ್ತಿಯನ್ನು ಪುನಃ

ಪಡೆದುಕೊಂಡು ಯುದ್ಧವನ್ನು ಮುಂದುವರೆಸುತ್ತದೆ. ಅದೇ ರೀತಿ ಶಕ್ತಿಯು ನೀವು ಇಷ್ಟಪಡುವ ಕಡೆಗೆ ಅಧಿಕವಾಗಿ ಇರುತ್ತದೆ ಎನ್ನುವ ಖಾತರಿ ಇಲ್ಲ. ಆದ್ದರಿಂದ ಸೋಲು ಗೆಲುವುಗಳೆರಡೂ ಇರುತ್ತವೆ. ಒಂದು ವೇಳೆ ನೀವು ಒಂದು ಕಡೆಗೆ ಇದ್ದು ವಿರುದ್ಧಗಳೊಂದಿಗೆ ಯುದ್ಧವನ್ನು ಮಾಡಿ ಯಾವಾಗಲೂ ಗೆಲುವನ್ನು ಸಾಧಿಸಿದರೂ, ನೀವು ಎಂದಿಗೂ ದೇವರನ್ನು ತಲುಪಲಾರರಿ, ಮಾಯೆಯಲ್ಲೇ ಸಿಲುಕಿಕೊಂಡಿರುತ್ತೀರಿ. ಆದುದರಿಂದ ಇದಕ್ಕೆ ಪರಿಹಾರವೆಂದರೆ, ವಿರುದ್ಧವಾದವುಗಳೆಲ್ಲವನ್ನೂ ಯುದ್ಧದ ಮೂಲಕ ನಾಶಗೊಳಿಸುವುದು ಇಲ್ಲವೇ ಮೂರನ್ನೂ ಸೇರಿಸಿ ಒಂದು ಮಾಡುವುದು.

ಅದೇ ರೀತಿ ಸೃಷ್ಟಿಯು ನಿಮ್ಮೊಳಗೆಯೇ ಸಂಭವಿಸುತ್ತಿದೆಯೆಂದು, ಎಲ್ಲಾ ತರಹದ ಪಾತ್ರಗಳನ್ನು ಪೂರ್ವಜನ್ಮದಲ್ಲೇ ಅನುಭವಿಸಿದ್ದೇನೆಂದು, ಎಲ್ಲಾ ತರಹದ ಅನುಭವಗಳನ್ನು ಪಡೆದಿದ್ದೇನೆಂದು, ಅವುಗಳೆಲ್ಲವನ್ನು ಸ್ವಚ್ಛವಾಗಿ ಪರಿವರ್ತನೆಗೊಳಿಸಿ ಮುಕ್ತಿಯನ್ನು ಹೊಂದುವುದಕ್ಕೆ ಈ ಜನ್ಮ ಪಡೆದಿರುವೆನೆಂದು, ಯುದ್ಧವನ್ನು ಮಾಡುತ್ತಿರುವುದು ನಿಮ್ಮ ಪೂರ್ವಜನ್ಮದ ಪಾತ್ರಗಳೊಂದಿಗೆ ಎನ್ನುವ ವಿಷಯವನ್ನು ಸದಾ ಮನಸ್ಸಿನಲ್ಲಿಟ್ಟುಕೊಂಡು ಅಂತರಂಗದಲ್ಲೇ ಯುದ್ಧವನ್ನು ಮಾಡಿರಿ. ಇಲ್ಲವೇ ಯುದ್ಧವನ್ನು ಮಾಡಲಾರೆನೆಂದು ಭಾವಿಸಿದರೆ ಆತ್ಮ ಸ್ಥಿತಿಯಲ್ಲಿ ಪುನಃ ಜನ್ಮಹೊಂದಲು "ಕರಗಿಹೋಗಿ" ಎನ್ನುವ ಟಾಪಿಕ್ ನಲ್ಲಿ ತಿಳಿಸಿದ ಹಾಗೆ ಕರಗಿ ಹೋಗುವ ಸಾಧನೆಯನ್ನು ಮಾಡಿರಿ.

ಆತ್ಮದೊಳಗೆ ಸ್ವಲ್ಪ ಸಮಯ ಕಳೆದನಂತರ ಶರೀರದೊಳಗೆ ಹಿಂತಿರುಗಿ ಬಂದುಬಿಡಿ. ಆಗ ಶರೀರದ ಒಳಗೆ ಹೊಸ ವ್ಯಕ್ತಿಯು ಪ್ರವೇಶಿಸುತ್ತಾನೆ, ಏಕೆಂದರೆ ಆಗ ನೀವು ಮೃತ್ಯುವನ್ನು ತಿಳಿದುಕೊಂಡಿರುತ್ತೀರಿ. ನಿಮಗೆ ತಿಳಿದಿರುವುದು ಶರೀರಕ್ಕೆ ಅತೀತವಾಗಿರುವ ಆತ್ಮದ ಆಯಾಮ. ಆದುದರಿಂದ ಪ್ರತಿಯೊಂದು ಅನುಭವ ಹೊಂದಿದ ನಂತರ ದೇವರ ಸಾಮ್ರಾಜ್ಯದೊಳಗೆ ಪ್ರವೇಶಿಸಿರಿ, ಆಗ ಮಾತ್ರ ನೀವು ಅಲ್ಲಿಂದಿಲ್ಲಿ-ಇಲ್ಲಿಂದಲ್ಲಿ ಪ್ರಯಾಣ ಮಾಡುವುದರಲ್ಲಿ ನಿಪುಣರಾಗುತ್ತೀರಿ. ದೇವರ ಸಾಮ್ರಾಜ್ಯವು ಸದಾ ಲಭ್ಯವಿರುತ್ತದೆ ಎನ್ನುವ ವಿಶ್ವಾಸ ನಿಮ್ಮಲ್ಲುಂಟಾಗುತ್ತದೆ. ಹಾಗೆಯೇ ದೇವರ ಬಳಿ ಪ್ರಾಪಂಚಿಕದ ಸಮಸ್ಯೆಗಳಿಗೆಲ್ಲಾ ಪರಿಹಾರ ದೊರಕುತ್ತದೆ. ಆದ್ದರಿಂದ ನೀವು ದೇವರ ಮೊರೆ ಹೋಗಿ ಅವನು ಸೂಚಿಸಿದ್ದನ್ನು ಆಚರಿಸಿದರೆ ಸಮಸ್ಯೆಗಳನ್ನು ನಿಮ್ಮಷ್ಟಕ್ಕೆ ನೀವೇ ಪರಿಹರಿಸಿಕೊಂಡು ಆನಂದದಿಂದ ಜೀವನ ಮಾಡುತ್ತೀರಿ.

ಹೀಗೆ ಪ್ರತಿದಿನ ಯುದ್ಧದ ಮೂಲಕ ಅಥವಾ ಮಿತ್ರತ್ವದ ಮೂಲಕ ಎಲ್ಲವನ್ನೂ ಸ್ವಚ್ಛಗೊಳಿಸಿ, ನಂತರ ಧ್ಯಾನದಿಂದ ಹೊರಬರುವ ಮುನ್ನ- ವಿರುದ್ಧವಾದವುಗಳೊಂದಿಗೆ ಸೌಹಾರ್ದತೆಯಿಂದ ಇರಬೇಕೆಂದು ಅಥವಾ ಎಲ್ಲರೊಂದಿಗೆ ಎಲ್ಲಾ ಪರಿಸ್ಥಿತಿಯಲ್ಲೂ ಅಂಟಿ-ಅಂಟದ ಹಾಗೆ ಇರಬೇಕೆಂದು ಅಥವಾ ಸೂತ್ರಧಾರನಾಗಿದ್ದು ಎಲ್ಲಾ ತರಹದ ಪಾತ್ರಗಳನ್ನು ಪೋಷಿಸಬೇಕೆಂದು ಅಥವಾ ನಿಮಗನ್ನಿಸಿದ ವಿಧದಲ್ಲಿ ಸಂಕಲ್ಪಿಸಿಕೊಂಡು ಸ್ವಲ್ಪ ಸಮಯದ ನಂತರ ಕಣ್ಣುಗಳನ್ನು ತೆರೆಯಿರಿ. ಈ ರೀತಿ ನಿಮ್ಮ ಸೃಜನಾತ್ಮಕತೆಯನ್ನು ಉಪಯೋಗಿಸಿಕೊಂಡು ಇದೇ ಶರೀರದಲ್ಲಿ ಹೊಸ ಹೊಸ ರೀತಿಯಲ್ಲಿ ಮರಣಿಸುತ್ತಾ ಮತ್ತೇ ಪುನರ್ಜನ್ಮಿಸುತ್ತಾ ಪೂರ್ವದ ಅನುಭವಗಳೆಲ್ಲವನ್ನೂ ಸ್ವಚ್ಛವಾದ ಅನುಭವಗಳನ್ನಾಗಿ ಪರಿವರ್ತಿಸಿರಿ. ಆಗಲೇ ಗತದ ಪ್ರಭಾವ ವರ್ತಮಾನದ ಮೇಲೆ ಇರುವುದಿಲ್ಲ, ಆಗಲೇ ಕರ್ಮಸಿದ್ಧಾಂತಕ್ಕೆ ಅತೀತವಾಗಿ ನೀವು ತಲುಪುತ್ತೀರಿ.

## ಕರಗಿಹೋಗಿ

ಶರೀರ, ಮನಸ್ಸು ಮತ್ತು ಹೃದಯವನ್ನು ಮೀರಿ ನಿಮ್ಮಲ್ಲಿರುವ ಆತ್ಮದ ಸಮೀಪ ತಲುಪಬೇಕೆಂದರೆ, ನಿಮ್ಮಲ್ಲುಂಟಾಗುವ ಆಲೋಚನೆಗಳ ಪ್ರಭಾವಕ್ಕೊಳಗಾಗಿ ಒಬ್ಬ ಕೈದಿಯಂತೆ ಜೀವಿಸುತ್ತಿದ್ದೀರೆಂದು ಮೊದಲು ನೀವು ಗುರುತಿಸಬೇಕು. ನಂತರ ಗಮನವನ್ನು ಆಲೋಚನೆಗಳಿಂದ ನಿಮ್ಮ ಕಡೆಗೆ ತಿರುಗಿಸಿ, ನಿಮ್ಮನ್ನು ನೀವು ಕರಗಿಸಿಕೊಳ್ಳುವುದಕ್ಕೆ ಸಾಧನೆಯನ್ನು ಮಾಡಿರಿ. ನೀಮ್ಮಲ್ಲಿ ಏನೇ ಸಂಭವಿಸುತ್ತಿದ್ದರೂ ಅದರಲ್ಲಿ ಎಳ್ಳಷ್ಟೂ ಪಾಲ್ಗೊಳ್ಳದೇ, ಕೇವಲ ನೀವು ಮಾತ್ರ ಮಂಜುಗಡ್ಡೆಯಂತೆ ಕರಗಿಹೋಗಿ ಸ್ವಚ್ಛಗೊಂಡ ನಂತರ ಅಂತರಂಗದೊಳಗೆಲ್ಲಾ ವ್ಯಾಪಿಸಿಕೊಂಡು ಹಾಗೆಯೇ ಇರಿ. ಅಂದರೆ ನಿಮ್ಮೊಳಗೆ ಯಾವ ಸಂಭಾಷಣೆಯಲ್ಲೂ ಪಾಲ್ಗೊಳ್ಳದೇ, ಆಲೋಚನೆಯನ್ನು ಮಾಡದೇ, ಬೇರೆ ಯಾವುದೇ ಕೆಲಸದಲ್ಲಿ ನಿರತರಾಗದೇ, ಕೇವಲ ನಾನು ವ್ಯಾಪಿಸಿದ್ದೇನೆನ್ನುವ ಭಾವನೆಯಲ್ಲೇ ಇರಿ. ಆಗ ನೀವು ಒಂದು ರೀತಿಯ ನಿದ್ರೆಯಂಥಹ ಸ್ಥಿತಿಯಲ್ಲಿ ಮೆಲ್ಲಗೆ ಜಾರುತ್ತೀರಿ, ಇಲ್ಲವೇ ನಿಮ್ಮಲ್ಲಿರುವ ಶೂನ್ಯ ಸ್ಥಿತಿಯಲ್ಲಿ ಇರುತ್ತೀರಿ. ಇಂಥಹ ಸ್ಥಿತಿಯಲ್ಲಿ ನೀವು ಸ್ವಲ್ಪ ಸಮಯ ಇರಲು ಸಾಧ್ಯವಾದರೆ, ಆಲೋಚನೆಗಳು ಅವಷ್ಯಕ್ಕವೇ ಕರಗಿ ಹೋಗಿ ನಿಮ್ಮೊಳಗೆ ನಿಶ್ಯಬ್ದವೇರ್ಪಟ್ಟು, ಆನಂತರ ದೇವರು ಪ್ರತ್ಯಕ್ಷನಾಗುತ್ತಾನೆ. ಆಗ ನೀವು ಅದ್ಭುತವಾದ ಸುಖದ, ಹಗುರತನದ, ತಾಜಾತನದ, ಆನಂದವನ್ನು ಅನುಭವಿಸುತ್ತೀರಿ. ತಕ್ಷಣ ಕಣ್ಣುಗಳನ್ನು ತೆರೆಯದೇ ಈ ಆನಂದವನ್ನು ಎಲ್ಲಾ ಭಾಗಗಳಿಗೆ ಕಳುಹಿಸಿಕೊಡಿ. ಇದರಿಂದ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ದೊರಕುತ್ತದೆ. ಹಾಗೆಯೇ ನಿಮ್ಮ ಎಲ್ಲಾ ಭಾಗಗಳ ಮಧ್ಯೆ ಸಮತೋಲನೆ ಏರ್ಪಡುತ್ತದೆ. ಈ ಧ್ಯಾನವನ್ನು ಯಾರಾದರೂ, ಯಾವಾಗಲಾದರೂ, ಎಲ್ಲಿಯಾದರೂ, ಯಾವುದೇ ಸಮಯದಲ್ಲಾದರೂ, ಎಷ್ಟು ಸಮಯ ಬೇಕಾದರೂ ಮಾಡಬಹುದು. ಪ್ರತಿದಿನ ಕನಿಷ್ಟ ಪಕ್ಷ ಹತ್ತು ನಿಮಿಷಗಳಾದರೂ ನಿಮ್ಮನ್ನು ನೀವು ಧ್ಯಾನದಲ್ಲಿ ತೊಡಗಿಸಿಕೊಳ್ಳಿರಿ.

## ಕಾಣಿಕೆಗಳು-Donations

ಈ ನ್ಯೂ ಎನರ್ಜಿ ಕಾನ್ಸೆಪ್ಟ್ ನ್ನು ಆಚರಿಸಿ ಲಾಭ ಪಡೆದವರು ಅಥವಾ ಮತ್ತಾರಾದರೂ ಕಾಣಿಕೆಗಳನ್ನು ನೀಡಬಯಸುವವರು ಈ ಕೆಳಗೆ ತಿಳಿಸಿರುವ ಬ್ಯಾಂಕ್ ಖಾತೆಗೆ ಹಣವನ್ನು ಪಾವತಿಸಬಹುದು. ನಿಮ್ಮ ಸಹಾಯದಿಂದ ನ್ಯೂ ಎನರ್ಜಿ ಜ್ಞಾನವನ್ನು ಅತ್ಯಧಿಕ ಜನರಿಗೆ ತಲುಪಿಸಲು ನಮಗೆ ಪ್ರೋತ್ಸಾಹವನ್ನುಂಟು ಮಾಡುತ್ತದೆ.

A/C DETAILS: P.SREEDHAR, STATE BANK OF INDIA, HANUMAKONDA BRANCH, IFSC CODE: SBIN0003422 A/C No: 30603897922. MOBILE No: 9390151912 - THIS NUMBER ALSO HAS GooglePay AND PhonePe.

** ಇದನ್ನು ತೆಲುಗು ಭಾಷೆಯಿಂದ ಅನುವಾದಿಸಲ್ಪಟ್ಟಿದೆ. ತೆಲುಗು ಭಾಷೆಯಲ್ಲಿ ಓದಬೇಕೆಂದು ಬಯಸುವವರು ಈ ಲಿಂಕನ್ನು ಕ್ಲಿಕ್ ಮಾಡಿ ಓದಬಹುದು.

http://darmam.com/downloads/telugutopics/4.1yuddam.pdf

** ನ್ಯೂ ಎನರ್ಜಿ-ಅದ್ವೈತ ಕಾನ್ಸೆಪ್ಟ್ ಅನ್ನು ಕನ್ನಡದಲ್ಲಿ ಕೇಳಬೇಕೆಂದು (To Listen) ಬಯಸುವವರು ಈ ಲಿಂಕನ್ನು ಕ್ಲಿಕ್ ಮಾಡಿ ಕೇಳಬಹುದು (Listen)

**https://www.youtube.com/playlist?list=PL7sfndcUtXfluvXK-CsihXrxGyyljh8n6**

** ನ್ಯೂ ಎನರ್ಜಿ-ಅದ್ವೈತ ಕಾನ್ಸೆಪ್ಟ್ ಅನ್ನು ತೆಲುಗು, ಇಂಗ್ಲೀಷ್, ಕನ್ನಡ, ಹಿಂದಿ ಭಾಷೆಯಲ್ಲಿ ಓದಬೇಕೆಂದು ಬಯಸುವವರು ಈ ಲಿಂಕನ್ನು ಕ್ಲಿಕ್ ಮಾಡಿ ಓದಬಹುದು. http://darmam.com/library.html

**ಈ ಕೆಳಗಿನ ಲಿಂಕನ್ನು ಕ್ಲಿಕ್ ಮಾಡಿ ಆಡಿಯೋಗಳನ್ನು ಕೇಳಿದರೆ ಮತ್ತು ಟಾಪಿಕ್ ಗಳನ್ನು ಓದಿದರೆ ನಿಮಗೆ ನ್ಯೂ ಎನರ್ಜಿ-ಅದ್ವೈತ ಕಾನ್ಸೆಪ್ಟ್ ಸ್ಪಷ್ಟವಾಗಿ ಅರ್ಥವಾಗುತ್ತದೆ.

**http://darmam.com/important-topics.html**